ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಚುನಾವಣಾ ಕ್ಷೇತ್ರ) ಇವರು ನಿಯಮ-330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.

**ವಿಷಯ:** ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಗೆ ಒಳಪಡುವ ಸುಮಾರು 176 ಗ್ರಾಮಗಳನ್ನೊಳಗೊಂಡ 5 ಲಕ್ಷಕ್ಕಿಂತ ಹೆಚ್ಚು ಸಂತ್ರಸ್ತ ರೈತ ಕುಟುಂಬಗಳು ಈ ನಾಡಿಗಾಗಿ ತಮ್ಮ ಆಸ್ತಿ ಅಂತಸ್ತುಗಳನ್ನು ತ್ಯಾಗ ಮಾಡಿದ ರೈತರ ಬದುಕು ಭವಣೆಗಳು (ವಾಸ್ತವಿಕವಾಗಿ ಎದುರಿಸುತ್ತಿರುವ ಸಮಸ್ಯೆಗಳ) ಮತ್ತು ಪ್ರಸ್ತುತ ಇವರ ಜೀವನ ಗುಣಮಟ್ಟ ಉನ್ನತೀಕರಿಸಲು ತೆಗೆದುಕೊಳ್ಳಬೇಕಾದ ಕ್ರಮದ ಕುರಿತು.

*****

**ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 & 2:**

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 ಮತ್ತು 2ರಡಿಯಲ್ಲಿ ಮುಳುಗಡೆ ಬಾಧಿತವಾದ 176 ಗ್ರಾಮಗಳಿಗೆ ಪರ್ಯಾಯವಾಗಿ ಅಗತ್ಯ ಮೂಲಭೂತ ಸೌಕರ್ಯ ಒದಗಿಸಿ 136 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿರುತ್ತದೆ. ವಿವರಗಳು ಈ ಕೆಳಗಿನಂತಿವೆ.

| ಕ್ರ ಸಂ | ವಿವರ | ನಾರಾಯಣಪುರ ಜಲಾಶಯ | ಆಲಮಟ್ಟಿ ಜಲಾಶಯ | ಒಟ್ಟು |
|---|---|---|---|---|
| 1 | ಮುಳುಗಡೆ ಗ್ರಾಮಗಳ ಸಂಖ್ಯೆ | 40 | 136 | **176** |
| 2 | ಪುನರ್ವಸತಿ ಕೇಂದ್ರಗಳ ಸಂಖ್ಯೆ | 34 | 102 | **136** |
| 3 | ಯೋಜನಾ ಭಾಧಿತ ಕುಟುಂಬಗಳ ಸಂಖ್ಯೆ | 11,744 (58,720 ಜನಸಂಖ್ಯೆ) | 58,432 (2,92,160 ಜನಸಂಖ್ಯೆ) | **70,176 (3,50,880 ಜನಸಂಖ್ಯೆ)** |

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1&2ರಡಿ ಮುಳುಗಡೆ ಹೊಂದಿದ ಜಮೀನುಗಳ ಭೂಸ್ವಾಧೀನತೆ, ಮುಳುಗಡೆ ಹೊಂದಿದ 176 ಗ್ರಾಮಗಳ ಪುನರ್‌ವಸತಿಗಾಗಿ ಹಾಗೂ 11 ಉಪ ಯೋಜನೆಗಳ ಕಾಲುವೆಗಳ ಜಾಲಗಳ ನಿರ್ಮಾಣಕ್ಕಾಗಿ ಒಟ್ಟಾರೆ 2.74 ಲಕ್ಷ ಎಕರೆ ಜಮೀನು ಕ್ಷೇತ್ರವನ್ನು ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಭೂಸ್ವಾಧೀನ ಮತ್ತು ಪುನರ್‌ವಸತಿ ಪ್ರಗತಿ ವಿವರಗಳು ಈ ಕೆಳಗಿನಂತಿವೆ:

| ಕ್ರ ಸಂ | ಉದ್ದೇಶ | ನಾರಾಯಣಪೂರ | ಆಲಮಟ್ಟಿ | ಭೀಮಾ ಬ್ರಿಡ್ಜ್ | ಸನ್ನತಿ ಬ್ರಿಡ್ಜ್ ಕಮ್ ಬ್ಯಾರೇಜ್ | ಒಟ್ಟು |
|---|---|---|---|---|---|---|
| 1 | ಪುನರ್ವಸತಿ ಕೇಂದ್ರ (ಎಕರೆ) | 3615 | 11477 | -- | -- | 15092 |
| 2 | ಮುಳುಗಡೆಯಾದ ಭೂಮಿ (ಎಕರೆ) | 37010 | 138460 | 289 | 1024 | 176783 |
| 3 | ಕಾಲುವೆ (ಎಕರೆ) | 60596 | 15954 | -- | 778 | 77328 |
| 4 | ಅಚ್ಚುಕಟ್ಟು ಮತ್ತು ಮುಖ್ಯ ರಸ್ತೆ (ಎಕರೆ) | -- | 4595 | -- | -- | 4595 |
| 5 | ಒಟ್ಟು (ಎಕರೆ) | **101221** | **170486** | **289** | **1802** | **273798** |

**ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದಡಿ ಸಂತ್ರಸ್ಥರ ಕುಟುಂಬಗಳ ಜೀವನಮಟ್ಟ ಸುಧಾರಿಸಲು ಕೈಗೊಂಡಿರುವ ಕ್ರಮಗಳು:**

- ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಗ್ರಾಮ ಮುಳುಗಡೆಯಾದ ಭಾದಿತ ಸಂತ್ರಸ್ಥರಿಗೆ ಈ ಮುಂಚೆ ಆಯಾ ಪುರ್ನವಸತಿ ಕೇಂದ್ರಗಳಲ್ಲಿ ಎನ್.ಜಿ.ಓ. ಸಂಸ್ಥೆಯವರಿಂದ ಟೇಲರಿಂಗ್, ಕಸೂತಿ, ಬ್ಯಾಗ್

ತಯಾರಿಕೆ, ಬಡಿಗೆ, ಕಮ್ಮಾರ, ಕುಂಬಾರ ಹಾಗೂ ಇನ್ನಿತರ ಕುಶಲಕರ್ಮಿ ಕೆಲಸಗಳ ಕೆಲಸ ನೀಡುವಲ್ಲಿ ತರಬೇತಿ ನೀಡಲಾಗಿದೆ. ಹಾಗೂ ಉತ್ಪನ್ನ ಹೆಚ್ಚುವರಿ ಯೋಜನೆಯಡಿ (ಐ.ಜಿ.ಎಸ್.) (Income Generation Scheme) ಎಮ್ಮೆ, ಆಡು, ಕುರಿ ಸಾಕಾಣಿಕೆಗಾಗಿ ರೂ.20,000/- ಗಳ ಸಹಾಯಧನ ನೀಡಲಾಗಿದೆ.

- ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಜಮೀನು ಮುಳುಗಡೆಯಾದ ಬಾಧಿತ ಕುಟುಂಬಗಳ ಸಂತ್ರಸ್ತರಿಗೆ ಸಂಬಂದಿಸಿದಂತೆ, ನಿರಾಶ್ರಿತರ ಯೋಜನೆ ಅಡಿಯಲ್ಲಿ ಸರ್ಕಾರದ ಹುದ್ದೆಗಳ ನೇಮಕಾತಿಯಲ್ಲಿ ಶೇಕಡಾ. 5 ರಷ್ಟು ಮೀಸಲಾತಿ ಕಲ್ಪಿಸಲಾಗಿದ್ದು ಪ್ರಸ್ತುತ ಚಾಲ್ತಿಯಲ್ಲಿದೆ.
- ಸರ್ಕಾರದ ಆದೇಶ ಸಂಖ್ಯೆ:RD 21 REH 94 (P) Bangalore Dated. 15-05-1995 ರ ಪ್ರಕಾರ ಅರ್ಹ ಸಂತ್ರಸ್ಥರಿಗೆ ಅವರು ಹೊಂದಿದ ಭೂ ಹಿಡುವಳಿ ಆಧಾರದ ಮೇಲೆ ನಿವೇಶನವನ್ನು ಮುಖ್ಯ ಸಂತ್ರಸ್ಥರಿಗೆ ಹಂಚಿಕೆ ಮಾಡಲಾಗಿದೆ.
- ಇದೂ ಅಲ್ಲದೇ ಇಬ್ಬರು ಅರ್ಹ ವಯಸ್ಕ ಗಂಡು ಮಕ್ಕಳಿಗೆ ಮತ್ತು 35 ವರ್ಷ ಮೀರಿದ ಅವಿವಾಹಿತ ಮಹಿಳೆಗೆ, ಸಹೋದರ ಸಂತ್ರಸ್ಥರಿಗೆ ಪುನರ್‌ವಸತಿ ಸೌಲಭ್ಯ ಕಲ್ಪಿಸಲಾಗಿದೆ.
- ಸರ್ಕಾರದ ಆದೇಶ ಸಂಖ್ಯೆ:RD 21 REH 94 (P) Bangalore Dated. 15.05.1995 ರ ಪ್ರಕಾರ ಅರ್ಹ ಸಂತ್ರಸ್ಥರಿಗೆ ಮನೆ ಕಟ್ಟಡ ಅನುಕಂಪ ಪರಿಹಾರ ಅನುದಾನ (House Construction Grant) ರೂ.22,000/- & ಜೀವನಾಂಶ ಭತ್ಯೆ (Substitance Allowance) ರೂ.2,800/- ನೀಡಲಾಗುತ್ತಿದೆ.
- ಕೃ.ಮೇ.ಯೋ. ಅಡಿ ಜಮೀನು ಕಳೆದುಕೊಂಡ ಸಂತ್ರಸ್ಥರಿಗೆ ಜಮೀನು ಖರೀದಿಗೆ ಅನುಕಂಪ ಪರಿಹಾರ ಮೊತ್ತವನ್ನು (Land Purchase Grant) ಈ ಕೆಳಗಿನಂತೆ ನೀಡಲಾಗುತ್ತಿದೆ.
  (i) ಕ್ಷೇತ್ರ 0.25 ಗುಂಟೆ ದಿಂದ 3.50 ಹೆಕ್ಟರ್ ಜಮೀನು ಕಳೆದುಕೊಂಡವರಿಗೆ: ರೂ.60,000/-
  (ii) ಕ್ಷೇತ್ರ 3.51 ಹೆಕ್ಟರ್ ರಿಂದ 6.75 ಹೆಕ್ಟರ್ ಜಮೀನು ಕಳೆದುಕೊಂಡವರಿಗೆ : ರೂ.40,000/-
  (iii) ಕ್ಷೇತ್ರ 6.76 ಹೆಕ್ಟರ್ ರಿಂದ 10 ಹೆಕ್ಟರ್ ಜಮೀನು ಕಳೆದುಕೊಂಡರವರಿಗೆ : ರೂ.20,000/-
- ಸದರಿ ಎಲ್ಲ ಪುನರವಸತಿ ಕೇಂದ್ರಗಳಲ್ಲಿ ಸಂತ್ರಸ್ಥರಿಗೆ ಶಾಶ್ವತವಾಗಿ ನೆಲೆಸುವ ಸಲುವಾಗಿ ರಸ್ತೆ, ನೀರು, ಸಾರ್ವಜನಿಕ ಸರ್ಕಾರಿ ಕಟ್ಟಡಗಳು, ತಿಪ್ಪೆಗುಂಡಿ, ಬಣವೆ ಹಾಗೂ ಸ್ಮಶಾನ ಜಾಗೆ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ನಾರಾಯಣಪುರ ಜಲಾಶಯದ ನೀರಿನ ಹಿನ್ನೀರಿನ ಮುಳುಗಡೆ ಹೊಂದಿದ 40 ಗ್ರಾಮಗಳಿಗೆ ನಿರ್ಮಿಸಲಾದ 34 ಪುನರ್ವಸತಿ ಕೇಂದ್ರಗಳ ಪೈಕಿ 30 ಪುನರ್ವಸತಿ ಕೇಂದ್ರಗಳನ್ನು 1991 ರಿಂದ 2014ರವರೆಗೆ ಮುಂದಿನ ನಿರ್ವಹಣೆಗಾಗಿ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆ.

ಸರ್ಕಾರದ ದಿನಾಂಕ:08.07.2016ರಲ್ಲಿ ಇನ್ನುಳಿದ 106 ಪುನರ್ವಸತಿ ಕೇಂದ್ರಗಳನ್ನು ಬಾಕಿ/ಮುಂದುವರೆದ ಕಾಮಗಾರಿಗಳಿಗಾಗಿ ಅವಶ್ಯವಿರುವ ರೂ. 191.50 ಕೋಟಿ ಒಂದಾವರ್ತಿ ಅನುದಾನದೊಂದಿಗೆ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಆದೇಶವಾಗಿರುತ್ತದೆ. ಅದರಂತೆ, ಅನುಮೋದಿತ ಅನುದಾನದೊಂದಿಗೆ 104 ಪುನರ್ವಸತಿ ಕೇಂದ್ರಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದ್ದು, ಇನ್ನೂ 2 (ಕಲಾದಗಿ & ಯಡಹಳ್ಳಿ (ಜಿ)) ಪುನರ್‌ವಸತಿ ಕೇಂದ್ರಗಳನ್ನು ಹಸ್ತಾಂತರಿಸುವುದು ಜಾರಿಯಲ್ಲಿದೆ.

ಸದರಿ 106 ಪುನರ್ವಸತಿ ಕೇಂದ್ರಗಳನ್ನು ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸದ ನಂತರವೂ ಸಹ ಸರ್ಕಾರದ ದಿನಾಂಕ:08.07.2016ರಂದು ನೀಡಿದ ಆದೇಶದಂತೆ ಅನುಮೋದನೆಗೊಂಡ ರೂ.191.50 ಕೋಟಿ ಮೊತ್ತ ಅಲ್ಲದೇ ಕೆಲವೊಂದು ಪುನರ್‌ವಸತಿ ಕೇಂದ್ರಗಳಿಗೆ 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಈ ಕೆಳಕಂಡ ಕಾಮಗಾರಿಗಳನ್ನು ಸಹ ನಿಗಮದಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ.

| ಕ್ರ | ಪುನರ್‌ವಸತಿ ಕೇಂದ್ರಗಳು | ವಿವರಗಳು | ಒದಗಿಸಿದ ಅನುದಾನ (ರೂ ಕೋಟಿಗಳಲ್ಲಿ) | ಷರಾ |
|---|---|---|---|---|
| 1 | ಹಂತ-1 & 2ರಲ್ಲಿ ನಿರ್ಮಿಸಿ ಹಸ್ತಾಂತರಿಸಲಾದ 106 ಪು. ಕೇಂದ್ರಗಳು | ಸರ್ಕಾರದ ಆದೇಶ ದಿನಾಂಕ:08.07.2016 | 191.50 | ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದೆ |
| 2 | ಕೋಲಾರ್ ಪುನರ್‌ವಸತಿ ಕೇಂದ್ರ | 2019-20ನೇ ಸಾಲಿನ ಬಜೆಟ್ ಘೋಷಣೆ | 50.00 | ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ. |
| 3 | ಮುದ್ದೇಬಿಹಾಳ ತಾಲ್ಲೂಕಿನ 10 ಪುನರ್‌ವಸತಿ ಕೇಂದ್ರಗಳು | ದಿನಾಂಕ:05.10.2020ರ 126ನೇ ನಿಗಮದ ಮಂಡಳಿ ಸಭೆಯ ನಿರ್ಣಯ ಹಾಗೂ ಸರ್ಕಾರದ ಪತ್ರ ದಿನಾಂಕ:24.06.2021 | 25.00 | ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದೆ |
| 4 | ಬೀಳಗಿ ಮತ ಕ್ಷೇತ್ರ ವ್ಯಾಪ್ತಿಯಲ್ಲಿನ 40 ಪುನರ್‌ವಸತಿ ಕೇಂದ್ರಗಳು | ದಿನಾಂಕ:05.12.2022ರ 136ನೇ ನಿಗಮದ ಮಂಡಳಿ ಸಭೆ | 40.00 | ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿ & ಟೆಂಡರ್ ಹಂತದಲ್ಲಿರುತ್ತದೆ. |
| | | **ಒಟ್ಟು** | **306.50** | |

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 & 2ರಡಿ ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡಿರುವ ಸಂತ್ರಸ್ಥರಿಗಾಗಿ ಪುನರ್‌ವಸತಿ & ಪುನರ್‌ನಿರ್ಮಾಣದ ನಿಯಮಾವಳಿಯನ್ವಯ ಕಾಲಕಾಲಕ್ಕೆ ವಿಳಂಬಕ್ಕೆ ಆಸ್ಪದ ನೀಡದೆ ಅಗತ್ಯ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಂಡು ಮುಂದಿನ ನಿರ್ವಹಣೆಗಾಗಿ ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಿದ್ದು, ಸಂತ್ರಸ್ಥ ಕುಟುಂಬಗಳ ಜೀವನಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

**(ಜಸಂಇ 80 ಡಬ್ಲ್ಯೂಬಿಎಂ 2025)**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**